**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.33/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ಹೆಚ್. ಮಾಳವ್ವ |
| ಗಂಡನ ಹೆಸರು | : | ಶ್ರೀಧರ ನಾಯರ್ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಪಿ.ಎಸ್.ಐ., ಬಿಳಿಚೋಡು ಪೊಲೀಸ್ ಠಾಣೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 13

ಸಿ.ಡಬ್ಲ್ಯೂ 16

ದಿ: 15-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ ಕೆ.ಎಸ್.)**:

1. ದಿಃ 22-03-2022 ರಿಂದ 01-02-2023 ರವರೆಗೆ ನಾನು ದಾವಣಗೆರೆಯ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕಾರ್ಯ ನಿರ್ವಹಿಸಿದ್ದೇನೆ. ದಿಃ 21-09-2022 ರಂದು ದೂರುದಾರರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಅಪರಾಧ ಕ್ರಮಾಂಕ 187/2022 ಕ್ಕೆ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ತಯಾರಿಸಿರುತ್ತೇನೆ. ಪ್ರ.ವ.ವರದಿಯನ್ನು ನಿಪಿ-18 ಅಂತ, ಸಾಕ್ಷಿ ಸಹಿಯನ್ನು ನಿಪಿ-18(ಎ) ಅಂತ ಗುರುತಿಸಲಾಯಿತು. ನಿಪಿ-1 ರ ದೂರನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಅಂತ ಗುರುತಿಸಲಾಯಿತು. ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ

ಚಾಸಾ-14 ಮತ್ತು 15 ರವನ್ನು ಆರೋಪಿಯ ಪತ್ತೆಗಾಗಿ ನೇಮಿಸಿರುತ್ತೇನೆ. ಅವರಿಬ್ಬರು ಆರೋಪಿಯನ್ನು ದಿಃ 21-09-2022 ರಂದು ಠಾಣೆಗೆ ಬಂದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ನಂತರ ನಾನು ಆರೋಪಿಯನ್ನು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ದಸ್ತಗಿರಿ ಕ್ರಮ ಜರುಗಿರಿಸಿ ಸೂಕ್ತ ಬೆಂಗಾವಲಿನೊಂದಿಗೆ ಠಾಣೆಯಲ್ಲಿ ಇರಸಿಕೊಂಡಿರುತ್ತೇನೆ.

2. ಮಾರನೇ ದಿನ ಪಂಚನಾಮೆ ಕ್ರಮವನ್ನು ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಜರುಗಿಸಿ, ನಿಪಿ-2 ರಂತೆ ಪಂಚನಾಮೆ ಮಾಡಿ ಹಳದಿ ಬಣ್ಣದ ಟಿ-ಶರ್ಟ, ಬಿಳಿ ಬಣ್ಣದ ಬನಿಯನ್ ನ್ನು ವಶಪಡಿಸಿಕೊಂಡಿರುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಅಂತ ಗುರುತಿಸಲಾಗಿದೆ. ನಿಪಿ-2 ರಲ್ಲಿ ನನ್ನ ಸಹಿಯನ್ನು ನಿಪಿ-2(ಸಿ) ಅಂತ ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ-3 ಮತ್ತು 4 ರಂತೆ ಪೋಟೋ ತೆಗೆಸಿರುತ್ತೇನೆ. ಸಾಕ್ಷಿ ಅವುಗಳನ್ನು ನೋಡಿ ಗುರುತಿಸುತ್ತಾರೆ. ಪೋಟೋಗಳ ಸಿಡಿಯನ್ನು ಈಗಾಗಲೇ ನಿಪಿ-15 ಅಂತ ಇದ್ದು, ಅದನ್ನು ನೋಡಿ ಗುರುತಿಸುತ್ತಾರೆ. ಅದರ ಬಾಬ್ತು ಕಲಂ 65B ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ. ಅದನ್ನು ಈಗಾಗಲೇ ನಿಪಿ-16 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-16(ಬಿ) ಅಂತ ಗುರುತಿಸಲಾಯಿತು. ನಂತರ ಆರೋಪಿಯ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

3. ದಿಃ 23-09-2022 ರಂದು ಚಾಸಾ-1 ರವರ ಮರುಹೇಳಿಕೆಯನ್ನು ಮತ್ತು ಚಾಸಾ-11 ಮತ್ತು 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 26-09-2022 ರಂದು ಗಾಯದ ಪ್ರಮಾಣ ಪತ್ರ ನೀಡಲು ಮನವಿ ಪತ್ರ ಸಲ್ಲಿರುತ್ತೇನೆ, ದಿಃ 13-10-2022 ರಂದು ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಗಾಯದ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-9 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಅಂತ ಗುರುತಿಸಲಾಯಿತು.

4. ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತನ್ನ ಜೊತೆ ಬಂದಲ್ಲಿ ತಾನು ಕೃತ್ಯಕ್ಕೆ ಬಳಸಿರುವಂತಹ ಚಾಕುವನ್ನು ತೋರಿಸುವುದಾಗಿ ಹೇಳಿದ್ದು, ಅದರಂತೆ ಪಂಚರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಆರೋಪಿಯು ನಮ್ಮೆಲ್ಲರನ್ನು ದಾವಣಗೆರೆಯ ನಮ್ಮ ಠಾಣೆಯ ಎದುರುಡಗಡೆ ಇರುವ ಹೈಸ್ಕೂಲ್ ಮೈದಾನಕ್ಕೆ ಕರೆದುಕೊಂಡು ತನ್ನ ಅಂಗಡಿಯ ಇದ್ದ ಮೇಲಾಘ್ಗದಲ್ಲಿ ಕೃತ್ಯಕ್ಕೆ ಬಳಸಿದ ಚಾಕು ಎಂಬುವುದಾಗಿ ತೆಗೆದು ತೋರಿಸಿದರು. ಆ ಚಾಕುವನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಆ ಚಾಕುವನ್ನು ಈಗ ನೊಡೀ ಗುರುತಿಸುತ್ತೇನೆ. ಆ ಸಮಯದಲ್ಲಿ ಪಂಚನಾಮೆ ಮಾಡಿರುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ-7 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಸಿ) ಅಂತ ಗುರುತಿಸಲಾಯಿತು. ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-19 ಅಂತ, ಸಾಕ್ಷಿ ಸಹಿಯನ್ನು ನಿಪಿ-19(ಎ), ಆರೋಪಿಯ ಸಹಿಯನ್ನು ನಿಪಿ-19(ಬಿ) ಅಂತ ಗುರುತಿಸಲಾಯಿತು. ಮು.ಮಾ.1 ರಿಂದ 3 ನ್ನು ವಶಪಡಿಸಿಕೊಂಡ ಬಗ್ಗೆ PF.No.93/2022 ಮತ್ತು PF.No.94/2022 ಎಂಬುವುದಾಗಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು. ಚಾಕುವನ್ನು ಅಮಾನತ್ತುಪಡಿಸಿಕೊಳ್ಳುವ ತೆಗೆದ ಪೋಟೋವನ್ನು ನಿಪಿ-8 ಅಂತ ಗುರುತಿಸಲಾಗಿದೆ. ಚಾಕುವನ್ನು ಚಾಸಾ-13 ರವರ ಮೂಲಕ FSL ಗೆ ಕಳುಹಿಸಲಾಯಿತು.

5. ದಿಃ 02-11-2022 ರಂದು FSL ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದನ್ನು ಈಗಾಗಲೇ ನಿಪಿ-13 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಅಂತ ಗುರುತಿಸಲಾಯಿತು. ಮು.ಮಾ.3 ರ ಬಗ್ಗೆ ವೈದ್ಯರ ಅಭಿಪ್ರಾಯವನ್ನು ಪಡೆದುಕೊಂಡಿರುತ್ತೇನೆ. ವೈದ್ಯರ ಅಭಿಪ್ರಾಯ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-11 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಅಂತ ಗುರುತಿಸಲಾಯಿತು. ದೂರುದಾರರ ವೈದ್ಯಕೀಯ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-20 ಅಂತ, ಸಾಕ್ಷಿ

ಸಹಿಯನ್ನು ನಿಪಿ-20(ಎ) ಅಂತ ಗುರುತಿಸಲಾಯಿತು. FSL ಗೆ ಸಲ್ಲಿಸಿದ ವರದಿಗಾಗಿ ಸಲ್ಲಿಸಿದ ಮನವಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-21 ಅಂತ, ಸಾಕ್ಷಿ ಸಹಿಯನ್ನು ನಿಪಿ-21(ಎ) ಅಂತ ಗುರುತಿಸಲಾಯಿತು. ನಂತರ ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಎಸ್.ಜೆ.ಕೆ., ವಕೀಲರಿಂದ ಆರೋಪಿತರ ಪರವಾಗಿ**:

6. ದೂರನ್ನು ಸಲ್ಲಿಸಲು ದೂರುದಾರರು ಒಬ್ಬರೇ ಠಾಣೆಗೆ ಬಂದಿದ್ದರು. ಬಡಾವಣೆ ಪೊಲೀಸ್ ಠಾಣೆಯು ಹೈಸ್ಕೂಲ್ ಮೈದಾನದಿಂದ ಅರ್ಧ ಕಿ.ಮೀ. ಅಂತರದಲ್ಲಿದೆ 05 ನಿಮಿಷದ ದಾರಿ ಅಂದರೆ ನಿಜ. ದೂರನ್ನು ಯಾರು ಬರೆದರು ಅಥವಾ ಟೈಪ್ ಮಾಡಿದರು ಅಂತ ಅದರಲ್ಲಿ ನಮೂದು ಮಾಡಿಲ್ಲ ಅಂದರೆ ನಿಜ. ನಿಪಿ-7 ಮತ್ತು ನಿಪಿ-2 ರಲ್ಲಿ ಕಾಣಿಸಿರುವ ತಾರೀಖು ಒಂದೇ ಇದೆ ಅಂದರೆ ಕೈ ತಪ್ಪಿನಿಂದ ಆಗಿರಬೇಕು ಆದರೆ ಅದೇ ದಾಖಲೆಯಲ್ಲಿ ಬೇರೆ ತಾರೀಖು ನಮೂದು ಮಾಡಿದೆ. ನಿಪಿ-7 ರಲ್ಲಿ ದಿಃ 21-09-2021 ಅಂತ ಇರುತ್ತದೆ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಅದು FIR ಹಾಕಿದ ದಿನಾಂಕ ಇರುತ್ತದೆ. ನಿಪಿ-2 ರಲ್ಲಿ ದಿಃ 21-09-2022 ಅಂತ ಇದೆ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಅದು FIR ಹಾಕಿದ ದಿನಾಂಕ ಇರುತ್ತದೆ. ನಿಪಿ-2 ರ ಸ್ಥಳ ಪಂಚನಾಮೆಯಲ್ಲಿ ಚಾಸಾ-4 ರವಿ, ಮೌನೇಶ್ವರ ಬಡಾವಣೆ, ಚಾಸಾ-5 ರುದ್ರೇಶ, ನಿಟ್ಟುವಳಿಯವರು ಅಂತ ಬರೆದಿದೆ ಅಂದರೆ ನಿಜ. ಚಾಸಾ-4 ಮತ್ತು 5 ರವರು ಹೈಸ್ಕೂಲ್ ಮೈದಾನದ ಅಕ್ಕಪಕ್ಕದ ನಿವಾಸಿಗಳು ಅಲ್ಲ ಅಂದರೆ ನಿಜ. ನಿಪಿ-7 ರ ಅಮಾನತ್ತು ಪಂಚನಾಮೆಯ ಸಾಕ್ಷಿಗಳಾದ ಚಾಸಾ-2 ಮನೋಜ, ನಿಟ್ಟುವಳಿಯವರು ಮತ್ತು ಚಾಸಾ-3 ರವರು ಶಿವಾನಂದ ಮುದ್ದಹಳ್ಳಿ ತೋಟದವರು ಅಂದರೆ ನಿಜ. ಚಾಸಾ-2 ಮತ್ತು 3 ರವರು ಹೈಸ್ಕೂಲ್ ಮೈದಾನದ ಅಕ್ಕಪಕ್ಕದ ನಿವಾಸಿಗಳು ಅಲ್ಲ ಅಂದರೆ ನಿಜ. ಈ ಹೈಸ್ಕೂಲ್ ಮೈದಾನದ ಸುತ್ತಮುತ್ತಲಿನಲ್ಲಿ ಸಾಕಷ್ಟು ಅಂಗಡಿಗಳು, ವಾಸದ ಮನೆಗಳು, ಶಾಲೆಗಳು ಇವೆ ಅಂದರೆ ಅಂಗಡಿಗಳಿವೆ ವಾಸದ ಮನೆಗಳು ಇಲ್ಲ. ನಿಪಿ-2

ಮತ್ತು 7 ರ ಪಂಚನಾಮೆ ಮಾಡುವ ಕಾಲಕ್ಕೆ ಸ್ಥಳೀಯರನ್ನು ಕರೆಸಿದ್ದೀರಾ ಅಂದರೆ ಅಂಗಡಿಯವರನ್ನು ಕರೆದೆವು ಬರಲಿಲ್ಲ. ಆ ಸಾಕ್ಷಿದಾರರಿಗೆ ನಾವು ನೋಟಿಸ್ಸು ಕೊಟ್ಟಿಲ್ಲ. ಚಾಸಾ-2 ರಿಂದ 5 ರವರು ದೂರುದಾರರ ಸ್ನೇಹಿತರು ಅಂದರೆ ಸುಳ್ಳು. ಅವರು ಸ್ನೇಹಿತರು ಮತ್ತು ವಿಶ್ವಾಸದವರು ಇದ್ದರು ಅಂತ ಅವರಿಂದ ಸುಳ್ಳು ಸಹಿ ಮಾಡಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲ.

7. ದೂರುದಾರರ ಗೋಬಿ ಮತ್ತು ದೋಸೆ ಹಾಕುವ ಗಾಡಿ ಮತ್ತು ಆರೋಪಿಯ ಮಂಡಕ್ಕಿ ಅಂಗಡಿ ನಿಪಿ-3 ಮತ್ತು 4 ರ ಪೋಟೋಗಳಲ್ಲಿ ಕಾಣುವುದಿಲ್ಲ ಅಂದರೆ ಸಾಕ್ಷಿದಾರರು ಹೇಳುತ್ತಾರೆ ನಿಪಿ-4 ರಲ್ಲಿ ಕಾಣುತ್ತದೆ, ನಿಪಿ-3 ರಲ್ಲಿ ಕಾಣುವುದಿಲ್ಲ. ನಿಪಿ-4 ರಲ್ಲಿ ಗಣಪತಿ ಪ್ರತಿಷ್ಠಾಪನೆ ಕಾಣಿಸುತ್ತಿಲ್ಲ ಅಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-3 ಮತ್ತು 4 ರ ಪೋಟೋಗಳು ಕೃತ್ಯ ನಡೆದ ಸ್ಥಳಕ್ಕೆ ಸಂಬಂಧಪಟ್ಟಿರುತ್ತದೆ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ನಿಪಿ-8 ರಲ್ಲಿ ಹೈಸ್ಕೂಲ್ ಮೈದಾನ ಮತ್ತು ಗಣಪತಿ ಪ್ರತಿಷ್ಠಾಪನೆಯಾಗಲಿ ಕಾಣಿಸುತ್ತಿಲ್ಲ ಅಂದರೆ ಸರಿಯಲ್ಲ. ನಿಪಿ-8 ರಲ್ಲಿ ದೂರುದಾರರ ದೋಸೆ ಗಾಡಿ ಕಾಣಿಸುತ್ತಿಲ್ಲ ಅಂದರೆ ನಿಜ. ನಿಪಿ-8 ರಲ್ಲಿ ಗಾಡಿಯ ಹಿಂಬದಿಯಲ್ಲಿ ಪರದೆ ಹಾಕಿರುವುದು ಕಾಣಿಸುತ್ತದೆ ಅಂದರೆ ಸರಿಯಲ್ಲ. ನಿಪಿ-8 ರಲ್ಲಿ ಪೊಲೀಸ್ ಠಾಣೆ ಕಾಣದೆ ಇರುವ ಹಾಗೆ ಪೊಲೀಸ್ ಠಾಣೆ ಮತ್ತು ಸ್ಥಳದ ಮಧ್ಯ ಒಂದು ಪರದೆ ಹಾಕಿದ್ದೇವೆ ಅಂದರೆ ಸರಿಯಲ್ಲ. ನಿಪಿ-3, 4, 8 ನ್ನು ಈ ಕೇಸಿಗಾಗಿ ಸೃಷ್ಟಿ ಮಾಡಲಾಗಿದೆ ಅಂದರೆ ಸರಿಯಲ್ಲ. ನಾವು ತೆಗೆಸಿರುವಂತಹ ಪೋಟೋ GPS ಪೋಟೋಗಳಲ್ಲ, ಸಾಧಾ ಪೋಟೋಗಳು ಇರುತ್ತವೆ. ಮು.ಮಾ.1 ರಿಂದ 3 ನ್ನು ವಶಪಡಿಸಿಕೊಂಡಿದ್ದು ಸುಳ್ಳು ಅಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು ದೂರುದಾರರ ಮರುಹೇಳಿಕೆ ಪಡೆದುಕೊಂಡಿದ್ದು ಸುಳ್ಳು ಅಂದರೆ ಸರಿಯಲ್ಲ. ಕಚ್ಚಾ ನಕಾಶೆ ತಯಾರಿಸಿದ್ದು ಸುಳ್ಳು ಅಂದರೆ ಸರಿಯಲ್ಲ. ದೂರುದಾರರು ಮರುಹೇಳಿಕೆಯಲ್ಲಿ ಎಂದಿನಂತೆ ಹೈಸ್ಕೂಲ್ ಮೈದಾನದ ಹಿಂಬದಿಯಲ್ಲಿ ತಾನು ಮತ್ತು ಚಾಸಾ-9 ರವರು ವ್ಯಾಪಾರ ಮಾಡಲು

ಹೋಗಿದ್ದೆವು ಅಂತ ಹೇಳಿದ್ದಾರೆ ಅಂದರೆ ಹೈಸ್ಕೂಲ್ ಮೈದಾನದ ನಡುಭಾಗದಲ್ಲಿ ಅಂತ ಹೇಳಿದ್ದಾರೆ. ಮೈದಾನದ ಹಿಂಬದಿಯಲ್ಲಿ ಆಗಲಿ ನಡುಭಾಗದಲ್ಲಿ ಆಗಲಿ ಇಲ್ಲ ಅಂದರೆ ಅದು ತಪ್ಪಾಗಿ ಟೈಪ್ ಆಗಿದೆ. ಆ ರೀತಿ ಮರುಹೇಳಿಕೆಯಲ್ಲಿ ಹೇಳಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಫ್ರಾಸಾ-2 ರವರು ನಾನು ಹೇಳಿದ ರೀತಿಯಲ್ಲಿ ಹೇಳಿಕೆ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಫ್ರಾಸಾ-3 ರವರು ತಮ್ಮ ಹೇಳಿಕೆಯಲ್ಲಿ ಆರೋಪಿಯು ಚಾಕುವನ್ನು ದೂರುದಾರರಿಗೆ ತೋರಿಸಿ ಬಿಡುವುದಿಲ್ಲ ಅಂತ ಹೇಳಿ ಅಲ್ಲೇ ಚಾಕುವನ್ನು ಬಿಸಾಡಿ ಓಡಿ ಹೋಗಿರುವುದು ಅಂತ ಹೇಳಿಲ್ಲ ಅಂದರೆ ಸರಿಯಲ್ಲ.

8. ಆರೋಪಿಯು ಸ್ವಇಚ್ಛಾ ಹೇಳಿಕೆಯನ್ನು ನೀಡಿದ್ದು ಸುಳ್ಳು ಅಂದರೆ ಸರಿಯಲ್ಲ. ನಿಪಿ-20 ರಂತೆ ನಾನು ವೈದ್ಯರ ಅಭಿಪ್ರಾಯ ಪಡೆದುಕೊಂಡಿದ್ದು ಸುಳ್ಳು ಅಂದರೆ ಸರಿಯಲ್ಲ. RFSL ವರದಿಯನ್ನು ಪಡೆದುಕೊಂಡಿದ್ದು ಸುಳ್ಳು ಅಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ತನಿಖೆ ಮಾಡಿಲ್ಲ ಅಂದರೆ ಸರಿಯಲ್ಲ. ತನಿಖೆಯಲ್ಲಿ ಆರೋಪಿಯು ಅಪರಾಧ ಮಾಡಿಲ್ಲ ಅಂತ ಕಂಡು ಬಂದರೂ ಸಹ ಆತನ ವಿರುದ್ಧ ಸುಳ್ಳು ದೋಷಾಣರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.